- -                     ಅಸಲು ದಾವೆ ಸಂ: **61/2023**     ಪಿ  .ಡಬ್ಲು **-2**

**ದಿ: 06-03-2026  ರಂದು ಸಾಕ್ಷಿ ಯನ್ನು  ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು: ಶ್ರೀ ವಿ.ಹೆಚ್.   ವಕೀಲರಿಂದ:**

1. ವಾದಿ ನನಗೆ ತಮ್ಮನಾಗಬೇಕು. 1ನೇ ಪ್ರತಿವಾದಿ ನನಗೆ ಅಣ್ಣನಾಗಬೇಕು, 2ನೇ ಪ್ರತಿವಾದಿ ತಮ್ಮನಾಗಬೇಕು 3 ಮತ್ತು 4ನೇ ಪ್ರತಿವಾದಿಯರು ಸಹೋದರಿಯರಾಗಬೇಕು. ನ್ಯಾಯಾಲಯಕ್ಕೆ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸದ್ದೆನೆ. ನನಗೆ ಇಂಗ್ಲೀಷ್ ಭಾಷೆ ಓದಲು ಬರೆಯಲು ಬರುವುದಿಲ್ಲ, ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರ ಇಂಗ್ಲೀಷ್ ಭಾಷೆಯಲ್ಲಿ ಬರೆದಿರುತ್ತಾರೆ ನಾನು ಅದನ್ನು ಹೇಳಿ ಬರೆಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳ ಬಗ್ಗೆ ನನಗೆ ಗೊತ್ತಿರುತ್ತದೆ. ಈ ದಾವೆಯನ್ನು ವಾದಿ

ಶಂಕ್ರಪ್ಪ ಹೊಲದ ಮೇಲೆ ತಕರಾರು ಇರುವ ಸಲುವಾಗಿ ಸಲ್ಲಿಸಿರುತ್ತಾನೆ. ದಾವಾ ಜಮೀನಿನ ಸರ್ವೆ ನಂಬರ್ 99 ಆಗಿರುತ್ತದೆ. ಈ ದಾವೆಯನ್ನು ಒಂದೇ ಜಮೀನಿನ ಮೇಲೆ ಸಲ್ಲಿಸಿರುತ್ತಾರೆ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅಸಲು ದಾವೆ ನಂಬರ್ 51/2017 ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಅವರು ರಾಜಿಯಾಗಿರುತ್ತಾರೆ ಎಂದರೆ ಸರಿ. ರಾಜಿ ಡಿಕ್ರಿಯ ಪ್ರಕಾರ ಅವರವರ ಹೆಸರಿಗೆ ಜಮೀನುಗಳು ಆಗಿರುತ್ತವೆ ಮತ್ತು ಅವರು ಸಾಗುವಳಿ ಮಾಡಿಕೊಂಡಿರುತ್ತಾರೆ. ಅಸಲು ದಾವೆ ನಂಬರ್ 51/2017 ರಲ್ಲಿ ರಾಜಿ ಡಿಕ್ರಿಯ ಪ್ರಕಾರ ಅವರವರ ಜಮೀನಿನ ಕಬ್ಜಾದಲ್ಲಿ ಮತ್ತು ಸಾಗುವಳಿಯಲ್ಲಿದ್ದಾರೆ ಎಂದರೆ ಸರಿ. ಈಗ ನಾವು ರಾಜಿಯಾಗಿರುವುದಿಲ್ಲ.

2. ರಾಜಿ ಡಿಕ್ರಿಯ ಪ್ರಕಾರ 1ನೇ ಪ್ರತಿವಾದಿಗೆ 04 ಎಕರೆ 11 ಗುಂಟೆ ಜಮೀನು ಭಾಗ ಬಂದಿರುತ್ತದೆ. 2ನೇ ಪ್ರತಿವಾದಿಗೂ ಸಹ 04 ಎಕರೆ 11 ಗುಂಟೆ ಜಮೀನು ಭಾಗ ಬಂದಿರುತ್ತದೆ. ವಾದಿ ಶಂಕ್ರಪ್ಪನಿಗೆ 04 ಎಕರೆ 11 ಗುಂಟೆ ಜಮೀನು ಭಾಗ ಬಂದಿರುತ್ತದೆ. 3ನೇ ಪ್ರತಿವಾದಿಗೆ 02 ಎಕರೆ 05 ವರೆ ಗುಂಟೆ ಭಾಗಕ್ಕೆ ಬಂದಿರುತ್ತದೆ. 4ನೇ ಪ್ರತಿವಾದಿಗೆ 36 ಗುಂಟೆ ಭಾಗಕ್ಕೆ ಬಂದಿರುತ್ತದೆ. ನನ್ನ ಭಾಗಕ್ಕೆ 02 ಎಕರೆ 05 ವರೆ ಗುಂಟೆ ಬಂದಿರುತ್ತದೆ. ದಾವಾ ಜಮೀನಿನ ಚಕ್ ಬಂದಿ, ಪೂರ್ವಕ್ಕೆ - ಅಮರಪ್ಪ ಕುಂಬಾರ ಇವರ ಹೊಲ, ಪಶ್ಚಿಮಕ್ಕೆ- ರಂಗಮ್ಮ ಇವರ ಹೊಲ, ಉತ್ತರ ದಿಕ್ಕಿಗೆ ಭೀಮಣ್ಣ ಇವರ ಹೊಲ ಮತ್ತು ದಕ್ಷಿಣ ದಿಕ್ಕಿಗೆ ಅರಕೇರಾ ರಸ್ತೆ. 1ನೇ ಪ್ರತಿವಾದಿಯ ಭಾಗಕ್ಕೆ ಬಂದ 04 ಎಕರೆ 11 ಗುಂಟೆ ಜಮೀನಿನ ಚಕ್ ಬಂದಿ, ಪೂರ್ವಕ್ಕೆ - ಅಮರಪ್ಪ ಕುಂಬಾರ ಇವರ ಹೊಲ, ಪಶ್ಚಿಮಕ್ಕೆ- ರಂಗಮ್ಮ ಇವರ ಹೊಲ, ಉತ್ತರ ದಿಕ್ಕಿಗೆ ಹಸನಮ್ಮ 3ನೇ ಪ್ರತಿವಾದಿ ಇವರ ಹೊಲ ಮತ್ತು ದಕ್ಷಿಣ ದಿಕ್ಕಿಗೆ ಭೀಮಶಂಕರ ಇವರ ಜಮೀನು ಇರುತ್ತದೆ. ವಾದಿ ಶಂಕ್ರಪ್ಪನ ಹೊಲದ ಪೂರ್ವ ದಿಕ್ಕಿಗೆ ಅಮರಪ್ಪ ಕುಂಬಾರ ಇವರ ಹೊಲ ಬರುವುದಿಲ್ಲ ಭೀಮಣ್ಣ 2ನೇ ಪ್ರತಿವಾದಿಯ ಹೊಲ ಬರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೂ ಮತ್ತು ನಿಮಗೂ ಸರಿ ಇಲ್ಲದೇ ಇರುವುದರಿಂದ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**
ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ